**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ**

**ಸಿಸಿ ನಂ. 251/2020**

ಚಾಸಾ-4 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 07-02-2026

| | | |
|---|---|---|
| ಹೆಸರು | : | ಸುರೇಶ |
| ತಂದೆಯ ಹೆಸರು | : | ಶಿವಯೋಗಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ASI |
| ವಾಸಸ್ಥಳ | : | ಯಡ್ರಾಮಿ ಪಿ.ಎಸ್. |

-: **ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-**

ದಿನಾಂಕಃ 16-08-2016 ರಿಂದ 10-08-2021 ರವರೆಗೆ ಅಫಜಲಪೂರ ಪೋಲಿಸ ಠಾಣೆಯಲ್ಲಿ ಪೋಲಿಸ ಮುಖ್ಯಪೇದೆಂಟಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 05-10-2019 ರಂದು ರಾತ್ರಿ ನಾನು ಚಾಸಾ 5, 6 ರವರು ಚಾಸಾ 1 ರವರ ಜೊತೆಗೆ ಗಸ್ತು ಕರ್ತವ್ಯದಲ್ಲಿದ್ದಾಗ ನಾವು ಅಫಜಲಪುರ ಬಸವೇಶ್ವರ ಸರ್ಕಲ ಹತ್ತಿರ ಬಂದಾಗ ಹವಳಗಾ ಗ್ರಾಮದ ರೇವಣ ಸಿದ್ದೇಶ್ವರ ದೇವಸ್ಥಾನದ ಹತ್ತಿರ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆಂಬ ಭಾತ್ಮಿ ಬಂದಿದ್ದು, ಆಗ ನಾವು ಬೆಳಗಿನ ಜಾವ 4-05 ಕ್ಕೆ ಹೊರಟೆವು. 4-20 ಕ್ಕೆ ನಾವು ಸಕ್ಕರೆ ಕಾರ್ಖಾನೆ ಹತ್ತಿರ ನಮ್ಮ ವಾಹನ ನಿಲ್ಲಿಸಿ ಅಲ್ಲಿ ನಿಂತಿದ್ದ ಇಬ್ಬರು ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಅವರಿಗೆ ಭಾತ್ಮಿ ವಿಷಯ ಪಂಚರಾಗಲು ಕೇಳಿಕೊಂಡಿರುತ್ತಾರೆ. ಅವರಿಬ್ಬರು ಒಪ್ಪಿಕೊಂಡಿರುತ್ತಾರೆ. ಅವರ ಹೆಸರು ಅಶೋಕ ಮತ್ತು ರಜಾಕ ಇರುತ್ತದೆ. ನಂತರ ಅವರೊಂದಿಗೆ ನಾವು ಹವಳಗಾ ಗ್ರಾಮಕ್ಕೆ 4-40 ಕ್ಕೆ ಮುಟ್ಟಿರುತ್ತೇವೆ. ಆಗ ನಮ್ಮ ವಾಹನದ ಬೆಳಕನ್ನು ನೋಡಿ ಅಲ್ಲಿ ಹೊರಟಿದ್ದ ಟಿಪ್ಪರ ವಾಹನ ಚಾಲಕನು

ವಾಹನ ಅಲ್ಲೆ ನಿಲ್ಲಿಸಿ ಓಡಿಹೋಗಿರುತ್ತಾನೆ. ಆ ನಂತರ ಪಂಚರ ಸಮಕ್ಷಮ ಸದರಿ ಲಾರಿಯನ್ನು ಪರಿಶೀಲಿಸಿದಾಗ ಅದರಲ್ಲಿ ಅರ್ಧ ತುಂಬಿದ ಮರಳು ಇರುತ್ತದೆ. ಸದರಿ ಲಾರಿ ಸಂಃ KA 28 C 1190 ಇರುತ್ತದೆ. ನಂತರ 4-50 ರಿಂದ 5-50 ರವರೆಗೆ ಚಾಸಾ 1 ರವರು ನಮ್ಮ ಹಾಗೂ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿ ವಾಹನ ಮತ್ತು ಮರಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ನಂತರ ಸದರಿ ಲಾರಿ ಮತ್ತು ಮರಳನ್ನು ಠಾಣೆಗೆ ತೆಗೆದುಕೊಂಡು ಬಂದಿರುತ್ತೇವೆ.

ದಿಃ 10-10-2019 ರಂದು ಓಡಿಹೋದ ಲಾರಿ ಚಾಲಕ ನ್ಯಾಯಾಲಯದ ಮುಂದೆ ಹಾಜರಾಗಿರುತ್ತಾನೆಂದು ಮತ್ತು ಆತನ ಹೆಸರು ಸಿದ್ದನಗೌಡ ಬಿರಾದರ ಅಂತ ಇದ್ದು ಆತನೇ ಲಾರಿಯ ಮಾಲಕ ಮತ್ತು ಚಾಲಕ ಇರುತ್ತಾನೆಂದು ಗೊತ್ತಾಗಿರುತ್ತದೆ.

ಸಾಕ್ಷಿಗೆ ಜಪ್ತಿ ಪಡಿಸಿಕೊಂಡರು  ಎಂದು ಹೇಳುವ ಲಾರಿಯ ಭಾವಚಿತ್ರವನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ **2** ರಿಂದ **5** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **PBP** ವಕೀಲರ ಪರವಾಗಿ **D.K.** ವಕೀಲರಿಂದಃ-</u>

ಚಾಸಾ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ.  ಅಫಜಲಪುರದಿಂದ ಹವಳಗಾ ಗ್ರಾಮ 9 ಕಿ.ಮಿ. ಇರುತ್ತದೆ.  ಅಫಜಲಪುರದಿಂದ ಹವಳಗಾ ಗ್ರಾಮಕ್ಕೆ ಹೋಗಲು 25 ನಿಮಿಷ ಬೇಕು. 25 ನಿಮಿಷದಲ್ಲಿ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ಜಪ್ತಿ ಪಡಿಸಿಕೊಂಡ ಲಾರಿ ಗುಡಿ ಮುಂದೆ ಉತ್ತರ ದಿಕ್ಕಿಗೆ ಇತ್ತು. ಗುನ್ಹೆಸ್ಥಳದ ಚೆಕುಬಂದಿ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಗುಡಿ, ಉತ್ತರಕ್ಕೆ ಘತ್ತರಗಾಗೆ ಹೋಗುವ ರಸ್ತೆ, ದಕ್ಷಿಣಕ್ಕೆ ಊರಲ್ಲಿ ಹೋಗುವ ರಸ್ತೆ ಇರುತ್ತದೆ. ಲಾರಿ ಚಾಲಕ ಓಡಿಹೋದ ಕುರಿತು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಜೀಪಿನ ಬೆಳಕಿನ ಸಹಾಯದಿಂದ ಬರೆದಿರುತ್ತೇವೆ. ನಾವು ದಾಳಿಗೆ ಹೋದಾಗ ಒಟ್ಟು 6 ಜನ ಇದ್ದೆವು. ನಾವು ಹೋದಾಗ ಸ್ಥಳದಲ್ಲಿ ಸಾರ್ವಜನಿಕರು ಇರಲಿಲ್ಲ. ಗುನ್ಹೆಸ್ಥಳದಲ್ಲಿ ಜಪ್ತಿ ಪಂಚನಾಮೆ ಮಾಡಿರುತ್ತೇವೆ.

ನಿಪಿ 2 ರಿಂದ 5 ರಲ್ಲಿ ಮರಳು ಕಾಣಿಸುವುದಿಲ್ಲ ಎಂದರೆ ಸಾಕ್ಷಿ ಲಾರಿಯ ಅರ್ಧ ಭಾಗ ಮಾತ್ರಾ ಮರಳು ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ 2 ರಿಂದ 5 ರ ಭಾವಚಿತ್ರಗಳು ಪೋಲಿಸ ಠಾಣೆಯ ಆವರಣದಲ್ಲಿ ತೆಗೆದ ಭಾವಚಿತ್ರಗಳು ಎಂದರೆ ಸರಿಯಲ್ಲ. ನಾವು ಹೋದಾಗ ಲಾರಿ ಚಾಲಕನು ಲಾರಿ

ಬಂದ ಮಾಡಿ ಹೋಗಿದ್ದನು. ಚಾಸಾ 2, 3 ರವರು ನಮ್ಮ ಠಾಣೆಯ ಪ್ರಕರಣದ ಪಂಚಸಾಕ್ಷಿ ಆಗಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಗೆ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ